ವರೆವಿಗೆ ಬಡ್ಡಿ ಸಮೇತ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಬಾಕಿ ಬರಬೇಕಾಗಿದೆ. ಈಗಾಗಲೇ ಈ ಕಂಪನಿಗೆ: ಗುತ್ತಿಗೆದಾರರಿಗೆ ಸೂಚನಾ ಪತ್ರಗಳನ್ನು ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದ್ದು ಬರಬೇಕಾದ ಬಾಕಿಯನ್ನು ಭೂ ಕಂದಾಯದ ಬಾಕಿಯೆಂದು ಪರಿಗಣಿಸಿ ಕಂದಾಯ ಇಲಾಖೆಯ ಅಧಿಕಾರಿಗಳ ಮೂಲಕ ವಸೂಲು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಹೊಸದುರ್ಗ ತಾಲ್ಲೂಕಿನಲ್ಲಿರುವ ಗೋಕುಲ್ ಸಿಮೆಂಟ್ ಕಾರ್ಖಾನೆಗೆ ಸುಣ್ಣದ ಕಲ್ಲು ಹಂಚಿಕೆ.

1060 (1826) ಶ್ರೀ ಟಿ.ಹೆಚ್. ಬಸವರಾಜ್ (ಹೊಸದುರ್ಗ):- ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ತಾಲ್ಲೂಕು ಮತ್ತೋಡು ಹೋಬಳಿಯಲ್ಲಿ ಸ್ಥಾಪಿತವಾಗಿರುವ ಗೋಕುಲ್ ಸಿಮೆಂಟ್ ಕಾರ್ಖಾನೆಗೆ ಕೊಟ್ಟಿರುವ ಸುಣ್ಣದ ಕಲ್ಲು ಹಂಚಿಕೆಯ ಪ್ರದೇಶದ ವಿಸ್ತೀರ್ಣವೆಷ್ಟು?

ಆ) ಸದರಿ ಸಿಮೆಂಟ್ ಕಾರ್ಖಾನೆಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟ ಪ್ರದೇಶವೆಷ್ಟು?

ಇ) ಸದರಿ ಕಾರ್ಖಾನೆ ಯಾವುದು ಅನಧಿಕೃತವಾಗಿ ಹೊಂದಿರುವ ಗಣಿಗಳ ಪ್ರದೇಶವೆಷ್ಟು ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೆಷ್ಟು?

ಈ) ಸದರಿ ಕಾರ್ಖಾನೆಯವರಿಂದ ಸರ್ಕಾರಕ್ಕೆ ಬರಬೇಕಾಗಿರುವ ರೆವಿನ್ಯೂ ಎಷ್ಟು ಹಾಗೂ ಅವರು ಉತ್ಪಾದಿಸುವ ಸಿಮೆಂಟಿನ ಪ್ರಮಾಣವೆಷ್ಟು?

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-

ಅ) ಮೆಸರ್ಸ್ ಗೋಕುಲ್ ಸಿಮೆಂಟ್ ಕಾರ್ಖಾನೆಯ ಹೆಸರಿನಲ್ಲಿ ಯಾವುದೇ ಸುಣ್ಣದ ಕಲ್ಲು-ಗಣಿ ಗುತ್ತಿಗೆಯನ್ನು ನೀಡಿರುವುದಿಲ್ಲ.

ಆದರೆ, ಮೆಸರ್ಸ್ ಕರ್ನಾಟಕ ಮಿನರಲ್ಸ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂ. ಲಿ. ಇದು ಈ ಕೆಳಕಂಡ 2 ಗಣಿ ಗುತ್ತಿಗೆಗಳನ್ನು ಹೊಂದಿದ್ದು ಗೋಕುಲ್ ಸಿಮೆಂಟ್ ಉತ್ಪಾದಿಸುತ್ತಿದೆ.

ಆ) ಗಣಿ ಗುತ್ತಿಗೆ ಸಂಖ್ಯೆ: 1882 ಅನ್ನು ಹೊಸದುರ್ಗ ತಾಲ್ಲೂಕ್, ತರೀಕೆರೆ ಗ್ರಾಮದಲ್ಲಿ 210 ಎಕರೆ ಪ್ರದೇಶದಲ್ಲಿ ಗುತ್ತಿಗೆ ನೀಡಲಾಗಿದೆ.

ಗಣಿ ಗುತ್ತಿಗೆ ಸಂಖ್ಯೆ: 1882 ಅನ್ನು ಹೊಸದುರ್ಗ ತಾಲ್ಲೂಕ್, ಮತ್ತೋಡು, ಕಪ್ಪನಾಯಕನಹಳ್ಳಿ ಮತ್ತು ಸಿದ್ದಗೊಂಡನಹಳ್ಳಿ ಗ್ರಾಮದಲ್ಲಿ 960 ಎಕರೆ ಪ್ರದೇಶದಲ್ಲಿ ಸುಣ್ಣದ ಕಲ್ಲಿಗಾಗಿ ಗುತ್ತಿಗೆ ಆಧಾರದ ಮೇಲೆ ನೀಡಿತ್ತು.

ಇ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಗಣಿ ಗುತ್ತಿಗೆ ಸಂಖ್ಯೆ 1690ರ ಸಂಬಂಧ 1995-96ನೇ ಸಾಲಿಗೆ ರೂ. 8,023-00 ಬರಬೇಕಾದ ಬಾಕಿಯನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಗಣಿ ಗುತ್ತಿಗೆ ಸಂಖ್ಯೆ 1882 ನೀಡಿರುವುದನ್ನು ಸರ್ಕಾರಿ ಆದೇಶ ಸಂಖ್ಯೆ ಸಿಐ 58 ಎಮ್ಎಮ್ಎಸ್ 90, ದಿನಾಂಕ 30-7-94ರ

ಪ್ರಕಾರ ರದ್ದುಗೊಳಿಸಲಾಗಿದೆ. ಸರ್ಕಾರಕ್ಕೆ ಬರಬೇಕಾದ ರೂ. 3,70,629–00 ಬಾಕಿಯನ್ನು ಭೂ-ಕಂದಾಯದ ಬಾಕಿಯಂತೆ ವಸೂಲಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ತಿಳಿಸ-ಲಾಗಿದೆ.

ಮೇಲೆ ತಿಳಿಸಿದ ಕಾರ್ಖಾನೆಯು 1993–94, 94–95 ಮತ್ತು 95–96ನೇ ಸಾಲುಗಳಲ್ಲಿ ಕ್ರಮವಾಗಿ 37,690,58,907 ಮತ್ತು 48,184 ಮೆ.ಟನ್. ಸಿಮೆಂಟ್‌ನ್ನು ಉತ್ಪಾದಿಸಿರುತ್ತದೆ.

ವಿಷಯ:- ಗೋಕಾಕ್ ತಾಲ್ಲೂಕಿನಲ್ಲಿ ರೇಷ್ಮೆ ಬೇಸಾಯ ಕುರಿತು

1062 (2057) **ಶ್ರೀ. ಚಂದ್ರಶೇಖರ್ ನಾಯಕ್ (ಗೋಕಾಕ್):-** ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ತಾಲ್ಲೂಕಿನಲ್ಲಿ 1995–96ರಲ್ಲಿ ಉತ್ಪಾದಿಸಿದ ರೇಷ್ಮೆ ಉತ್ಪನ್ನ ಎಷ್ಟು?

ಆ) ಗೋಕಾಕ್ ಮತಕ್ಷೇತ್ರದ ರೇಷ್ಮೆ ಉತ್ಪನ್ನ ಎಷ್ಟು? ಬೆಳೆಯ ಕ್ಷೇತ್ರವೆಷ್ಟು?

ಇ) ರೇಷ್ಮೆ ಬೆಳೆಯ ಬಗ್ಗೆ ಜನರಲ್ಲಿ ಆಸಕ್ತಿ ಬೆಳೆಯಲು ರೇಷ್ಮೆ ಇಲಾಖೆಯು ಕೈಗೊಂಡ ಕ್ರಮ-ಗಳೇನು?

ಈ) ಗೋಕಾಕ್ ತಾಲ್ಲೂಕಿನ ರೇಷ್ಮೆ ಎಳೆ ಬಿಡಿಸುವ 'ತಿಗಡಿ' ಕೇಂದ್ರವು ಎಂದಿನಿಂದ ಕಾರ್ಯ ಪ್ರಾರಂಭಿಸುವುದು?

ಉ) ಸದರಿ ಕೇಂದ್ರದ ಗರಿಷ್ಠ ಪ್ರಮಾಣವೆಷ್ಟು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

ಅ) 90.420 ಮೆಟ್ರಿಕ್ ಟನ್‌ಗಳು.

ಆ) 8.560 ಮೆಟ್ರಿಕ್ ಟನ್‌ಗಳು 21.60 ಹೆಕ್ಟೇರ್ ಅಥವಾ 54.00 ಎಕರೆ.

ಇ) ಅರ್ಹ ಫಲಾನುಭವಿಗಳಿಗೆ ಪ್ರೋತ್ಸಾಹಧನ :ಸಹಾಯಧನ ನೀಡಲಾಗುತ್ತದೆ, ತರಬೇತಿಯನ್ನು ನೀಡಲಾಗುತ್ತದೆ.

ಈ) ಜನವರಿ 97 ಮಾಹೆಯಿಂದ ಪ್ರಾರಂಭಿಸಲು ವ್ಯವಸ್ಥೆ ಮಾಡಲಾಗಿದೆ.

ಉ) 7½ ಮೆಟ್ರಿಕ್ ಟನ್ ರೇಷ್ಮೆ.

ವಿಷಯ:- ಬೆಳಗಾವಿ ಜಿಲ್ಲೆಯಲ್ಲಿರುವ ಸರ್ಕಾರಿ ವಸತಿ ನಿಲಯಗಳ ಸಂಖ್ಯೆ

1063 (2096) **ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್):-** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಸರ್ಕಾರಿ ವಸತಿ ನಿಲಯಗಳೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು).